# ಜಗನ್ನಾಥ ಮಾನ್ವಿಕರ್ ಗ್ರಾಮೀಣ ಅಭಿವೃದ್ಧಿ ಸಂಘ ದ 2018-19 ರ ಕಾರ್ಯಕ್ರಮಗಳು

ಕಾರ್ಯಕ್ರಮದ ಹೆಸರು : ರೊಟ್ಟಿ ಕೇಂದ್ರದ ಲಾಭ ನಷ್ಟದ ಕುರಿತು

ದಿನಾಂಕ : 21/11/18




ಕಾರ್ಯಕ್ರಮದ ವಿವರ: ಮಾನವಿ ಪಟ್ಟಣದ 6 ನೇ ವಾರ್ಡಿನ್ ದೇವಣ್ಣ ತೋಟದ ರೊಟ್ಟಿ ಕೇಂದ್ರಕ್ಕೆ ಭೇಟಿ ನೀಡಿ ಅವರು ತಯಾರಿಸಿರುವ ಚಪ್ಪಾತಿ & ರೊಟ್ಟಿ ಪೂರಿ ಮಾಡುವ ವಿಧಾನ & ಮಷಿನುಗಳನ್ನು ನಮ್ಮ ಸಂಘವು ಪರೀಶಿಲಿಸಿ ವ್ಯಾಪಾರದಲ್ಲಿ ಲಾಭ ನಷ್ಟದ ಬಗ್ಗೆ ಕಾರ್ಯ ಚಟುವಟಿಕೆಯ ಬಗ್ಗೆ & ವ್ಯಾಪಾರ ಹೆಚ್ಚಿಸುವ ಬಗ್ಗೆ ಅವರೊಂದಿಗೆ ಚರ್ಚಿಸಿ ನಮ್ಮ ಸಂಘವು ಅವರಿಗೆ ಇನ್ನೂ ಹೆಚ್ಚಿನ ಸಹಾಯ ಮಾಡಲಾಯಿತು .

ಕಾರ್ಯಕ್ರಮದ ಹೆಸರು: ಸ್ತ್ರೀ ಶಕ್ತಿ ಗುಂಪು ಸ್ವ ಸಹಾಯ ಗುಂಪಿನವರಿಗೆ ಮೈ ಕ್ರೋ ಫೈನಾನ್ಸ ಕಡೆಯಿಂದ ಸಹಾಯ

ದಿನಾಂಕ : 26/01/2019




ಕಾರ್ಯಕ್ರಮದ ವಿವರ , ನಮ್ಮ ಸಂಘದ ವತಿಯಿಂದ ಸ್ವ ಸಹಾಯ ಗುಂಪಿನವರಿಗೆ ಹಾಗೂ ಸ್ತ್ರೀ ಶಕ್ತಿ ಗುಂಪಿನವರಿಗೆ ಮೈಕ್ರೋ ಫೈನಾನ್ಸ ಕಡೆಯಿಂದ ಹಣಕಾಸಿನ(ಲೋನ್) ಸಹಾಯ ಮಾಡಲಾಯಿತು

ಕಾರ್ಯಕ್ರಮದ ಹೆಸರು : ಉಚಿತ ವೈದ್ಯಕೀಯ ತಪಾಸಣೆ ಗ್ರಾಮ ಗುಡದಿನ್ನಿ

ದಿನಾಂಕ : 09/02/2019






ಜಗನ್ನಾಥ ಮಾನ್ವಿಕರ್ ಗ್ರಾಮೀಣಾಭೀವೃದ್ಧಿ ಸಂಘದಿಂದ ಉಚಿತ ಆರೋಗ್ಯ ತಪಾಸಣೆ ಕಾರ್ಯಕ್ರಮವನ್ನು ಕೆ, ಗುಡದಿನ್ನಿ ಯಂತಹ ತೀರ ಹಿಂದುಳಿದ ಪ್ರದೇಶದಲ್ಲಿನ ಬಡ ಜನರ ಆರೋಗ್ಯದ ಹಿತ ದೃಷ್ಟಿಯಿಂದ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಹಮ್ಮಿಕೊಳ್ಳಲಾಯಿತು .

ಚಿಕಿತ್ಸೆಯ ವಿವರ ಸ್ತ್ರೀ ರೋಗ ತಜ್ಞರು, ಮಕ್ಕಳ ತಜ್ಞರು , ಎಲುಬು & ಕೀಲು ತಜ್ಞರು ಇನ್ನಿೀತರ ಜನರಲ್ ಚಕಪ್ ಈ ಮೇಲೆ ಕಾಣುವ ಎಲ್ಲಾ ಕಾಯಿಲೆಗಳಿಗೆ ಉಚಿತ ತಪಾಸಣೆ ನೀಡಲಾಯಿತು

ಕಾರ್ಯಕ್ರಮದ ಹೆಸರು : ಮಹಿಳಾ ದಿನಾಚಾರಣೆ

ದಿನಾಂಕ : 08/03/2019




ಕಾರ್ಯಕ್ರಮದ ವಿವರ ಮಹಿಳಾ ದಿನಾಚಾರಣೆಯಂದು ನಮ್ಮ ಸಂಘದ ವತಿಯಿಂದ ಮುಖ್ಯ ಅಧಿಕಾರಿಗಳಾದ ವಿಜಯಲಕ್ಷ್ಮೀ ಪುರಸಭೆ ಮಾನವಿ ಹಾಗೂ ಪುರಸಭೆಯ ಸಿಬ್ಬಂದಿ ಇವರಿಗೆ ಹಾಗೂ “ಮಕ್ಕಳ & ಮಹಿಳಾ ವಿಭಾಗ”ದ ಮುಖ್ಯ ಅಧಿಕಾರಿಗಳಿಗೆ & ಇಬ್ಬರೂ ಸಿಬ್ಬಂದಿ ವರ್ಗ & ಜ್ಞಾನನಿಧಿ ಶಾಲೆಯ ಶಿಕ್ಷಕಿ ಇವರಿಗೆ ನಮ್ಮ ಸಂಘದ ವತಿಯಿಂದ ಇವರಿಗೆ ಉತ್ತಮ ಮಹಿಳಾ ಕೆಲಸ ಗಾರರುಯೆಂದು ಸನ್ಮಾನ ಮಾಡಲಾಯಿತು.

ಕಾರ್ಯಕ್ರಮದ ಹೆಸರು : ಉದ್ಯೋಗ ಮೇಳ

ದಿನಾಂಕ :20/03/2019





"ನಿರುದ್ಯೋಗ ಸಮಸ್ಯ ನಿವಾರಣೆಗೆ ಉದ್ಯೋಗ್ ಮೇಳ ಅವಶ್ಯ"

ಕಾರ್ಯಕ್ರಮದ ವಿವರ ಪ್ರತಿಯೊಬ್ಬ ಯುವಕರು ಯಾವುದಾದರು ಉದ್ಯೋಗ ಮಾಡಿದಾಗ ಮಾತ್ರ ಸುಭದ್ರ ಜೀವನ ನಡೆಸಲು ಸಾಧ್ಯ ಈ ನಿಟ್ಟಿನಲ್ಲಿ ಸಂಘ ಸಂಸ್ಥೆಗಳು ಉದ್ಯೋಗ ಮೇಳ ಕಾರ್ಯಕ್ರಮವನ್ನು ಆಯೋಜಿಸುವುದು ಅವಶ್ಯ. ಈ ಉದ್ಯೋಗ ಮೇಳ ಕಾರ್ಯಕ್ರಮದಲ್ಲಿ 132 ಜನ ಯುವಕ & ಯುವತಿಯರು ಪಾಲ್ಗೊಂಡಿದ್ದರು ಅದರಲ್ಲಿ 22 ಜನ ಯುವಕ & ಯುವತಿಯರು ಆಯ್ಕೆಯಾದರು .